ದಿನಾಂಕ 09-03-2026 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು 7ನೇ ಪ್ರತಿವಾದಿ ಪರ ಶ್ರೀ ವಿ.ಎಸ್.ಎಸ್., ವಕೀಲರಿಂದಃ-

ಓ.ಎಸ್.345/2012 ದಾವೆಯಲ್ಲಿ ಈ ಪ್ರಸ್ತುತ ದಾವಾ ಸ್ವತ್ತಿನ ಆಸ್ತಿ ನಿಮಗೆ ಬಂದಿತ್ತು ಎಂದು ಬರೆಸಲು ನಿಮಗೆ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ತೊಂದರೆ ಇರಲಿಲ್ಲ ಎಂದು ನುಡಿಯುತ್ತಾರೆ. ಸದರಿ ದಾವೆಯಲ್ಲಿ ಆ ದಾವೆಯ ಸ್ವತ್ತುಗಳು ನಿಮ್ಮ ಚಿಕ್ಕಪ್ಪ ಮತ್ತು ನಿಮಗೆ ಹೇಗೆ ಬಂದವು ಎಂದು ಬರೆಸಿದ್ದೀರಿ ಎಂದರೆ ಸಾಕ್ಷಿಯು ಆ ಕೇಸಿನ ಸರ್ವೇ ನಂಬರ್‌ಗಳಿಗೆ ಸಂಬಂಧಪಟ್ಟಂತೆ ಮಾತ್ರ ಹೇಳಿಕೆ ಕೊಟ್ಟಿದ್ದೇವೆ, ಪ್ರಸ್ತುತ ದಾವಾ ಸ್ವತ್ತನ್ನು ಆ ದಾವೆಯಲ್ಲಿ ಸೇರಿಸಿರಲಿಲ್ಲ ಎಂದು ನುಡಿಯುತ್ತಾರೆ. ಮಂಗಳ ಮತ್ತು ವಿನಯ್‌ಕುಮಾರ್ ಗೊತ್ತು. ಪ್ರತಿವಾದಿ 3 ರಿಂದ 8ರವರು ಗೊತ್ತು. ಓ.ಎಸ್.335/2007 ದಾವೆಯನ್ನು ಈ ದಾವೆಯ ಪ್ರತಿವಾದಿ 1 ಮತ್ತು 2ರವರು ಸಲ್ಲಿಸಿದ್ದರೆಂದು ನನಗೆ 2007ರಲ್ಲಿ ಗೊತ್ತಿತ್ತು ಎಂದರೆ ಸರಿಯಲ್ಲ. ಓ.ಎಸ್.335/2007 ದಾವೆಯ ಸ್ವತ್ತುಗಳು ಆ ದಾವೆಯ ವಾದಿ ಮತ್ತು ಪ್ರತಿವಾದಿಗಳ ಕುಟುಂಬಕ್ಕೆ ಸೇರಿದ ಸ್ವತ್ತುಗಳು ಎಂದರೆ ಸುಳ್ಳು.

ಪ್ರಸ್ತುತ ದಾವೆಯಲ್ಲಿ ಓ.ಎಸ್.335/2007 ದಾವೆಯ ಸ್ವತ್ತುಗಳನ್ನು ಸೇರಿಸಿಲ್ಲ ಎಂದರೆ ಸಾಕ್ಷಿಯು ಈ ಸ್ವತ್ತಿಗೆ ಪ್ರತಿವಾದಿಗಳು ತೊಂದರೆ ಕೊಟ್ಟಿದ್ದರಿಂದ ಈ ಕೇಸು ಹಾಕಿದ್ದೇವೆ ಎಂದು ನುಡಿಯುತ್ತಾರೆ. ಓ.ಎಸ್.335/2007 ದಾವೆಯನ್ನು ಆ ದಾವೆಯ ವಾದಿ, ಪ್ರತಿವಾದಿಗಳ ಕುಟುಂಬಕ್ಕೆ ಸೇರಿದ ಸ್ವತ್ತಿಗೆ ಸಂಬಂಧಪಟ್ಟಂತೆ ಭಾಗಾಂಶಕ್ಕಾಗಿ ಸಲ್ಲಿಸಿದ್ದರು ಎಂದರೆ ಗೊತ್ತಿಲ್ಲ. ಆ ದಾವೆಯಲ್ಲಿ ರಾಜೀ ಮಾಡಿಕೊಂಡು ಆ ದಾವೆಯ ಸ್ವತ್ತು ಹಾಗೂ ಪ್ರಸ್ತುತ ದಾವಾ ಸ್ವತ್ತು ಆ ದಾವೆಯ ವಾದಿ, ಪ್ರತಿವಾದಿಗಳ ಭಾಗಕ್ಕೆ ಬಂತು ಎಂದರೆ ಸಾಕ್ಷಿಯು ಸುಳ್ಳು, ನಮ್ಮ ಸ್ವತ್ತನ್ನು ಸೇರಿಸಿ ರಾಜೀ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ನಿಮ್ಮ ಸ್ವತ್ತನ್ನು ಸೇರಿಸಿಕೊಂಡು

ರಾಜೀ ಮಾಡಿಕೊಂಡರು ಎಂದು ಯಾವಾಗ ಗೊತ್ತಾಯಿತು ಎಂದರೆ ಸಾಕ್ಷಿಯು ಮಂಗಳಮ್ಮ ಮತ್ತು ವಿನಯ್‌ಕುಮಾರ್ ಅವರ ಅನುಭವದಂತೆ ಅಳತೆ ಮಾಡಿಸಲು ಬಂದಾಗ ತೀರ್ಪಿನ ಪ್ರತಿ ತೋರಿಸಿದರು, ಆಗ ಗೊತ್ತಾಯಿತು ಎಂದು ನುಡಿಯುತ್ತಾರೆ. ಅದು 2010-11ರಲ್ಲಿ. 2010-11ರಲ್ಲೇ ಈ ದಾವೆಯ ಪ್ರತಿವಾದಿ 1 ಮತ್ತು 2ರವರು ಓ.ಎಸ್.335/2007ರಲ್ಲಿ ರಾಜೀ ಮಾಡಿಕೊಂಡಿದ್ದಾರೆಂದು ಗೊತ್ತಾಯಿತು. ಆ ಸಮಯದಲ್ಲಿ ರಾಜೀ ಡಿಕ್ರಿಯ ಪ್ರತಿಯನ್ನು ನೋಡಿದ್ದೀರಿ ಎಂದರೆ ಸಾಕ್ಷಿಯು ಅವರು ತೋರಿಸಿದರು, ನೋಡಿದೆ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ಪ್ರತಿವಾದಿ 1 ಮತ್ತು 2ರವರು ಅರ್ಜಿ ಸಲ್ಲಿಸಿ, ಸರ್ವೇ ಮಾಡಿಸಿಕೊಂಡಿದ್ದಾರೆ ಎಂದರೆ ಸಾಕ್ಷಿಯು ಮಂಗಳ ಮತ್ತು ವಿನಯ್‌ಕುಮಾರ್ ರವರು ರಾಜೀ ಡಿಕ್ರಿಯಂತೆ ತಪ್ಪಿರುವುದರಿಂದ ಅನುಭವದಂತೆ ಸರ್ವೇ ಮಾಡಿಸಿಕೊಂಡರು ಎಂದು ನುಡಿಯುತ್ತಾರೆ.

2010ರಲ್ಲೇ ರಾಜೀ ಡಿಕ್ರಿಯನ್ನು ಪ್ರಶ್ನೆ ಮಾಡಿ ಕೇಸು ಹಾಕಲು ನಿಮಗೆ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಇತ್ತು, ಊರಿನಲ್ಲಿ ನ್ಯಾಯ ಪಂಚಾಯಿತಿ ಮಾಡಿದಾಗ ಪಂಚಾಯಿತಿಯಲ್ಲಿ ಅವರು ಯಾರಿಗೂ ಬೆಲೆ ಕೊಡಲಿಲ್ಲ, 2-3 ವರ್ಷ ಕಾದೆವು, ಅವರು ಬರದಿದ್ದಕ್ಕೆ ಕೇಸು ಹಾಕಿದೆವು ಎಂದು ನುಡಿಯುತ್ತಾರೆ. ಈ ವಿಚಾರವನ್ನು ವಾದಪತ್ರದಲ್ಲಿ ಬರೆಸಿಲ್ಲ. ದಾವಾ ಸ್ವತ್ತಿನಲ್ಲಿ 7ನೇ ಪ್ರತಿವಾದಿಯೇ ಮಾಲೀಕರಾಗಿ ಸ್ವಾಧೀನದಲ್ಲಿದ್ದು, 2010ರಲ್ಲೇ ನಿಮಗೆ ರಾಜೀ ಡಿಕ್ರಿಯ ಬಗ್ಗೆ ಗೊತ್ತಿದ್ದರೂ ಸಹ 2015ರವರೆಗೆ ದಾವೆ ಸಲ್ಲಿಸಿರಲಿಲ್ಲ ಎಂದರೆ ಸಾಕ್ಷಿಯು ನಾವೇ ಮಾಲೀಕರಾಗಿದ್ದು, ನಾವು ದಾಖಲೆ ಮಾಡಿಕೊಳ್ಳಲು ಆಗಲಿಲ್ಲ, ಅದಕ್ಕೆ ನಾವು ಕೇಸು ಹಾಕಿದ್ದೇವೆ ಎಂದು ನುಡಿಯುತ್ತಾರೆ. ಓ.ಎಸ್.335/2007 ದಾವೆ ಸಲ್ಲಿಸಿದಾಗಲೇ ಯಾವ ಯಾವ ಸ್ವತ್ತುಗಳಿವೆ ಎಂದು ಗೊತ್ತಿದ್ದರೂ ಸಹ ಪ್ರತಿವಾದಿ 7ರವರಿಗೆ ತೊಂದರೆ ಕೊಡಬೇಕೆಂತಲೇ ಈ ದಾವೆ ಸಲ್ಲಿಸಿದ್ದೇವೆ ಎಂದೆರ ಸರಿಯಲ್ಲ. ಈಗಲೂ ದಾವಾ ಸ್ವತ್ತಿಗೆ 7ನೇ ಪ್ರತಿವಾದಿ, ಅವರ ವಾರಸುದಾರರೇ ಮಾಲೀಕರು ಹಾಗೂ ಸ್ವಾಧೀನಾನುಭವದಲ್ಲಿದ್ದು, ನಾವು ದಾವಾ ಸ್ವತ್ತಿನ ಸ್ವಾಧೀನದಲ್ಲಿಲ್ಲ ಎಂದರೆ ಸರಿಯಲ್ಲ. ನಾನು

ಹಾಜರುಪಡಿಸಿರುವ ಯಾವುದೇ ದಾಖಲೆಗಳು ನಾನು ದಾವಾ ಸ್ವತ್ತಿನ ಮಾಲೀಕ ಮತ್ತು ಸ್ವಾಧೀನದಲ್ಲಿದ್ದೇನೆ ಎಂಬುವುದನ್ನು ಸಾಬೀತುಪಡಿಸುವುದಿಲ್ಲ ಎಂದರೆ ಸರಿಯಲ್ಲ.

ನಿಪಿ-18ರಲ್ಲಿ ದಾವಾ ಸ್ವತ್ತು ಎಂಟೂವರೆ ಗುಂಟೆ ನಿಮ್ಮ ತಂದೆಗೆ ಸೇರಿಸಿದ್ದು ಎಂದು ಎಲ್ಲಿಯೂ ನಮೂದು ಮಾಡಿಲ್ಲ ಎಂದರೆ ಸುಳ್ಳು. ನಿಪಿ-18ರಲ್ಲಿ ಆ ರೀತಿ ಬರೆದಿಲ್ಲದಿದ್ದರೂ ಸಹ ಸುಳ್ಳು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕು, ಸ್ವಾಧೀನ ಇಲ್ಲ, 7ನೇ ಪ್ರತಿವಾದಿಯೇ ಮಾಲೀಕರು ಮತ್ತು ಸ್ವಾಧೀನದಲ್ಲಿ ಇರುವುದು ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.